ಭರ್ತಿಮಾಡುಲು ಅನುಮತಿ ನೀಡಿರುವುದರಿಂದ, ಸದ್ಯದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.ಈಹುದ್ದೆಗಳನ್ನು ಅಬಾಲಿಷ್ ಮಾಡುವ ಪ್ರಸ್ತಾವನೆ ಇಲ್ಲ.

4. ಉತ್ತರ ಕನ್ನಡ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ.

1.35. ಪಿ.ಎಂ.

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಉಪಾಧ್ಯಕ್ಷಣೆಯವರೆ, ಉತ್ತರ ಕರ್ನಾಟಕದ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಕುರಿತು-ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಶೈಕ್ಷಣಿಕವಾಗಿ, ಕೃಷಿ, ಕೈಗಾರಿಕೆ, ನೀರಾವರಿ, ಗ್ರಾಮೀಣ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗದೇ ಬಹಳ ಹಿಂದುಳಿದಿರುತ್ತದೆ. ಇಲ್ಲಿನ ಅನೇಕ ಅಭಿವೃದ್ಧಿ ಕಾರ್ಯಗಳು ಅರ್ಧವಾಗಿ ಉಳಿದಿದ್ದು ಯೋಜನೆಗಳು ಕಾರ್ಯಗತಗೊಳ್ಳದೆ ಹಾಗೆ ಉಳಿದಿರುತ್ತದೆ. ಅಲ್ಲದೆ ಇಲ್ಲಿನ ಸಾರ್ವಜನಿಕರ ಪ್ರಮುಖ ಬೇಡಿಕೆಗಳಲ್ಲಿ ಇದೊಂದು ಸಹ ಮುಖ್ಯವಾದ ಬೇಡಿಕೆಯಾಗಿರುತ್ತದೆ. ಆದಕಾರಣ, ಈ ಭಾಗದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚಿಸಿ 1993-94ನೇ ಸಾಲಿನ ಆಯವ್ಯ ಪತ್ರದಲ್ಲಿ ನೂರು ಕೋಟಿ ರೂಪಾಯಿ ಮೀಸಲಿಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಎಂ. ವೀರಪ್ಪ ಮೋಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ, ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಶಿವಮೊಗ್ಗ ಇವುಗಳು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿದೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳು ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯ ವೈಖರಿಯನ್ನು ವೀಕ್ಷಿಸುವುದು ಸೂಕ್ತ.

ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿಗ್ರಾಮದಲ್ಲಿ ವಿವಿಯನ್ ಡಿಸಿಲ್ವ ಎನ್ನುವವರ ಕೊಲೆ.

ಶ್ರೀ ಸಿ.ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷಣೆಯವರೆ, ದಿನಾಂಕ 29-12-1992ರ ರಾತ್ರಿ 10-30 ಗಂಟಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿ ಗ್ರಾಮದಲ್ಲಿ ಕೆಲವು ಯುವಕರು ವಿವಿಯನ್ ಡಿಸಿಲ್ವ ಎನ್ನುವ ಯುವಕನನ್ನು ತಿವಿದು ಕೊಂದು ಅದೇ ವ್ಯಕ್ತಿಯ ಸಂಬಂಧಿಗಳನ್ನು ಮರಣಾಂತಿಕವಾಗಿ ತಿವಿದಿರುತ್ತಾರೆ. ಈ ಘಟನೆ ನಡೆದ ಹತ್ತೇ ನಿಮಿಷಗಳಲ್ಲಿ ಸಾರ್ವಜನಿಕರು ದೂರವಾಣಿ ಮೂಲಕ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಆ ವೇಳೆಯಲ್ಲಿ ಉಪಸ್ಥಿತರಿದ್ದ ಹೆಡ್ ಕಾನ್‌ಸ್ಟಬಲ್ ಮತ್ತು ಠಾಣೆಯ ರೈಟರ್‌ರವರಿಗೆ ಆರೋಪಿಗಳ ಹೆಸರು, ಬಳಸಿದ ವಾಹನಗಳ ವಿವರ ನೀಡಿದ್ದಾಗ್ಯೂ ಪೋಲೀಸರು ಒಂದೂವರೆ ಕಿಲೋ ಮೀಟರ್ ದೂರದ ಈ ಘಟನಾ ಸ್ಥಳಕ್ಕೆ ಮೂರು ಗಂಟೆ ತಡವಾಗಿ ಬಂದು ಆರೋಪಿಗಳು ತಪ್ಪಿಸಿಕೊಳ್ಳುವಲ್ಲಿ ಸಹಕರಿಸಿರುತ್ತಾರೆ.